SRI ABDUL NAZEER SAB.-- The Zilla Parishad will carry out the assigned functions from the Government. For example, Oldage Pension. It is a policy of the State Government. We assign it to the Mandal Panchayat and they will perform it. Similarly, the policy with regard to the agricultural labourers. We will assign that function to the Mandal Panchayat.

ಶ್ರೀ ಎಂ. ಎಸ್. ಕೃಷ್ಣನ್.-- ಸ್ಪೆಸಿಫಿಕ್ ಆಗ...

ಶ್ರೀ ಅಬ್ದುಲ್ ನಜೀರ್ ಸಾಬ್.-- ಅವರಲ್ಲಿ ದುಡ್ಡು ಇರುವುದಿಲ್ಲ, ಅವರು ಮಾಡುವುದಿಲ್ಲ. ಅದಕೆ ನಮ್ಮ ಸರ್ಕಾರದವರ ಹತ್ತಿರ ದುಡ್ಡು ಇರುತ್ತದೆ, ನಾವು ಮಾಡುತ್ತೇವೆ.

SRI M. S. KRISHNAN.--ಇಲ್ಲಿ ತಾವು ಏನು ಹೇಳಿದ್ದೀರಿ.

"Sanitation and Conservancy and prevention and abatment of nuisance ;

Construction and maintenance of public latrines

Disposal of nlaimed corpses and carcases and unclaimed cattle ; regulating the collection, removal and disposal or manure and sweepings :

Promotion of welfare of women and children ; Management of local religious institutions etc.

ಅದನ್ನೆಲ್ಲಾ ಹೇಳಿದ್ದೀರಿ why ಆದರೆ don;t you include the implementation of the minimum wages to agricultural labourers shall be one of the function..,

SRI ABDUL NAZIR SAB.--Unless and until, the Government assigns that work, they cannot implement ಈಗ Kerala Agricultural Labourers, Pension Scheme ಇದೆ. That is assigned scheme of the Government. Here under the provision of promotion and welfare, they can promote the interest of the agricultural labourers.

SRI M. S. KRISHNAN.-- There are so many programmes mentioned here which cannot be implemented in the manner in which you say. But, the programme which I am mentioning can be implemented since there is a social force, statutory force.

Announcement

MR. DEPUTY SPEAKER.-- As required under sub-rule (1) of Rule 239 of the Rules of Procedure and Conduct of Business in the Karnataka Legislative Assembly, Hon. Speaker has nominated the following Members to the Business Advisory Committee.

Sriyuths :

1. Ramakrishna Hegde, Chief Minister.
2. A. Lakshmisagar, Minister for Law, Parliamentary Affairs and Housing.
3. H. D. Deve Gowda, Minister for Public Works.
4. M Veerappa Moily, Leader of Opposition.
5. Dr. V. S. Acharya.
6. M. S. Krishnan
7. S. Suryanarayana Rao.

8. B. G. Banakar.
9. R S. Mane.
10. K. H. Ranganath.

The House now stands adjourned to meet again at 2-00 P.M.

(The House adjourned at 1-00 P. M. to reassemble again at 2-00 P. M.)

ಸಭೆಯು ಪುನಃ 2 ಗಂಟೆ 15 ನಿಮಿಷಗಳಿಗೆ ಪ್ರಾರಂಭವಾಯಿತು.

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ವಿತ್ತೀಯ ಕಾರ್ಯಕಲಾಪಗಳು

1984-85ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ :

ಶ್ರೀ ಕೆ ಜಿ. ಮಹೇಶ್ವರಪ್ಪ (ಮಾಯಕೊಂಡ).— ಮಾನ್ಯ ಅಧ್ಯಕ್ಷರೇ, 1984-85ನೇ ಸಾಲಿನ ಆಯವ್ಯಯ ಪತ್ರವನ್ನು ನಾನು ಸ್ವಾಗತಿಸುತ್ತಾ ಕೆಲವು ಮುಖ್ಯ ವಿಷಯಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ ಜನತಾ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷವಾಯಿತು. ಈ ಒಂದು ವರ್ಷದಲ್ಲಿ ಜನತಾ ಸರ್ಕಾರದ ಸಾಧನೆಗಳ ಬಗ್ಗೆ ನಾನು ದೀರ್ಘವಾಗಿ ವಿಶ್ಲೇಷಣೆ ಮಾಡುವುದಕ್ಕೆ ನಾನು ಪ್ರಯತ್ನ ಮಾಡುವುದಿಲ್ಲ. ಈ ಒಂದು ವರ್ಷದಲ್ಲಿ ನಮ್ಮ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಹಾಲುಜೇನು ಹರಿಸಿದೆ ಎಂದು ನಾನು ಹೇಳುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಭಾಷಣದ ಪ್ರಾರಂಭದಲ್ಲಿ ಈ ರೀತಿ ಹೇಳಿದ್ದಾರೆ

ಇನ್ನೂ ಅನೇಕ ಸಮಸ್ಯೆಗಳು ನಮ್ಮೆದುರು ಇವೆ. ಮಾಡಬೇಕಾದುದೂ ಸಾಕಷ್ಟು ಇದೆ. ನನ್ನ ಜನ ನುತ್ತ ದೃಷ್ಟೀಕರಿಸಿದ ಸದ್ಭಾವ ಸಮರ್ಥನೆಗಳ ಬಲದಿಂದ ಬರಲಿರುವ ವರ್ಷಗಳಲ್ಲಿ ಅವರ ನಿರೀಕ್ಷೆಗಳಿಗೆ ತಕ್ಕಂತೆ ಕಾರ್ಯ ಪ್ರವೃತ್ತರಾಗಲು ಪ್ರಯತ್ನಿಸುತ್ತೇವೆ. ಹೀಗೆ ಕೆಲವು ಅಭಿನಂದನಾಪೂರ್ವಕವಾದಂಥ ಮಾತುಗಳನ್ನು ಹೇಳಿದ್ದಾರೆ. ನೂಡಬೇಕಾದ ಕೆಲಸಗಳು ಇನ್ನೂ ಇವೆ ಎಂದು ಹೇಳಿದ್ದಾರೆ. ಅನೇಕ ಸವಾಲುಗಳನ್ನು ಎದುರಿಸುತ್ತಿದ್ದೇವೆಂದು ಸಹ ಹೇಳಿದ್ದಾರೆ. ಒಟ್ಟಿನಲ್ಲಿ ನಮ್ಮ ಸರ್ಕಾರ ಜನತೆಯ ನಿರೀಕ್ಷೆಯ ಮಟ್ಟದಲ್ಲಿ ಕೆಲಸಗಳ ಸಾಧನೆ ಮಾಡಿದೆ ಎಂದರೆ ತಪ್ಪಾಗಲಾರದು. ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಸುದೀರ್ಘವಾಗಿ ಕರ್ನಾಟಕ ರಾಜ್ಯದ ಆರ್ಥಿಕ ಸಮೀಕ್ಷೆಯ ಬಗ್ಗೆ ಪ್ರಸ್ತಾಪ ಮಾಡಿದರು ನಮ್ಮ ಸರ್ಕಾರ ಪ್ರಕಟ ಮಾಡಿರತಕ್ಕಂಥ ಆರ್ಥಿಕ ಸಮೀಕ್ಷೆಯನ್ನು ನೋಡಿದಾಗ 1983-84ನೇ ವರ್ಷ ಇತ್ತೀಚಿನ ವರ್ಷಗಳಲ್ಲಿ ಅತ್ಯಂತ ಉತ್ತಮವಾದಂಥ ವರ್ಷ ಎಂಬುದು ತಿಳಿದುಬರುತ್ತದೆ. 1983-84ನೇ ಸಾಲಿನ ವರಮಾನ 6945 ಕೋಟಿ ರೂಪಾಯಿಗಳು ಆದರೆ 1982-83ನೇ ಸಾಲಿನ ವರಮಾನ 5987 ಕೋಟಿ ರೂಪಾಯಿಗಳು. ಇದನ್ನು ಈಗಿನ ಪ್ರಸಕ್ತ ಬೆಲೆಯ ಆಧಾರದ ಮೇಲೆ ನೋಡುವುದಾದರೆ, ಆದಾಯದಲ್ಲಿ ಶೇಕಡಾ 16ರಷ್ಟು ಹೆಚ್ಚಾಯಿತು. ಪರ್-ಕ್ಯಾಪಿಟಾ ಇನ್‌ಕಮ್ ಕೂಡ ಶೇಕಡಾ 13ರಷ್ಟು ಹೆಚ್ಚಾಯಿತು. ಈ ಕಾರಣದಿಂದ ನನ್ನ ಕರ್ನಾಟಕ ರಾಜ್ಯದ ಆರ್ಥಿಕ ಪರಿಸ್ಥಿತಿ 1983-84ನೇ ಸಾಲಿನಲ್ಲಿ ನಿರಾಶದಾಯಕವಾಗಿರಲಿಲ್ಲ ಮತ್ತು ಈ ಬಗ್ಗೆ ವಿರೋಧಪಕ್ಷದ ನಾಯಕರು ಏನು ಒಂದು ಚಿತ್ರ ಕೊಟ್ಟರು, ಅದು ಸಮರ್ಥನೀಯವಲ್ಲ, ಅದು ಸತ್ಯಕ್ಕೆ ದೂರವಾದ ವಿಚಾರ ಎಂದು ಹೇಳುತ್ತೇನೆ. ನಮ್ಮ ಸರ್ಕಾರ ಸಾರ್ವಜನಿಕ ಪ್ರತಿನಿಧಿಗಳೊಡನೆ ಯಾವುದೇ ವಿಚಾರದಲ್ಲಿಯೂ ಮಾತುಕತೆ ನಡೆಸುತ್ತಿಲ್ಲವೆಂದು ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಭಾಷಣದ ಪ್ರಾರಂಭದಲ್ಲಿ ಹೇಳಿದರು. ಪ್ರಮುಖ ವಿಚಾರಗಳು ಬಂದಾಗ ವಿರೋಧಪಕ್ಷದವರ ಜೊತೆಯಲ್ಲಿ ಸಮಾಲೋಚನೆ ಮಾಡುತ್ತಿಲ್ಲವೆಂಬ ಆಪಾದನೆಯನ್ನು ಮಾಡಿದರು. ಆದರೆ ಅದು ಸರಿಯಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವುದೇ ಚಳುವಳಿ ನಡೆಯಲಿ ಅಂದರೆ ರೈತರ ಚಳುವಳಿಯಾಗಲೀ, ರಾಜಕುಮಾರ್ ಬೆಂಬಲಿಗರ ಚಳುವಳಿಯಾಗಲೀ, ಲೇಖಕರು ಮತ್ತು ಕಲಾವಿದರ ಚಳುವಳಿಯಾಗಲೀ, ಕಾರ್ಮಿಕರ ಚಳುವಳಿಯಾಗಲೀ, ವಿದ್ಯಾರ್ಥಿಗಳ ಚಳುವಳಿಯಾಗಲಿ, ಹೀಗೆ ಯಾವ ಚಳುವಳಿ ನಡೆಯಲಿ, ಇಂತಹ ಪ್ರತಿ ಚಳುವಳಿ ನಡೆದಾಗಲೂ ಸಹ ನಮ್ಮ ಸರ್ಕಾರದವರು